**500/– ರೂಪಾಯಿ ವರ್ಗದ ನೋಟುಗಳನ್ನು ಅಂಗೀಕರಿಸದಿರುವುದು**

ಡಿಸಿಎಂ.300/08.04.21/2000–2001 ಜನವರಿ 5, 2001

ಅಧ್ಯಕ್ಷರು,
ಎಲ್ಲ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳು–ಇವರಿಗೆ

ಮಾನ್ಯರೇ,

**500/– ರೂಪಾಯಿ ವರ್ಗದ ನೋಟುಗಳನ್ನು ಅಂಗೀಕರಿಸದಿರುವುದು.**

ಕೆಲವು ಬ್ಯಾಂಕುಗಳು 500/– ರೂಪಾಯಿ ನೋಟುಗಳನ್ನು ಅಂಗೀಕರಿಸದಿರುವುದನ್ನು ಅಥವಾ ಅಂಥ ನೋಟುಗಳನ್ನು ಬ್ಯಾಂಕಿಗೆ ನೀಡುವವರಿಂದ ಅವುಗಳ ಸಂಖ್ಯೆ ಮುಂತಾದವುಗಳ ಪಟ್ಟಿಯನ್ನು ಮಾಡಿಸಿಕೊಂಡ ನಂತರ ಅವುಗಳನ್ನು ಅಂಗೀಕರಿಸುತ್ತಿರುವುದನ್ನು ನಮ್ಮ ಗಮನಕ್ಕೆ ತರಲಾಗಿದೆ.

2. ಆದ್ದರಿಂದ ನಾವು, ನಮ್ಮ ಪತ್ರ ಡಿಸಿಎಂ ಸಂಖ್ಯೆ. 927/08.06.01/97–98 ದಿನಾಂಕ 18ನೇ ಜೂನ್ 1998 ರ ಕಡೆಗೆ ನಿಮ್ಮ ಗಮನ ಸೆಳೆಯಬಯಸುತ್ತೇವೆ ಮತ್ತು ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ಬಿಡುಗಡೆ ಮಾಡಿದ ಎಲ್ಲ 500/– ರೂಪಾಯಿಯ ವರ್ಗದ ನೋಟುಗಳು ಕಾನೂನು ಸಮ್ಮತವಾದವುಗಳಾಗಿವೆ ಆದ್ದರಿಂದ ಅವುಗಳನ್ನು ಎಲ್ಲ ವ್ಯವಹಾರಗಳಿಗೂ ಮುಕ್ತವಾಗಿ ಅಂಗೀಕರಿಸುತ್ತಾ ಹೋಗಬೇಕು ಎಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತಿದ್ದೇವೆ.

3. ಪರಿಷ್ಕೃತ ಬಣ್ಣದ ಯೋಜನೆಯಲ್ಲಿ 500/– ರೂಪಾಯಿ ನೋಟುಗಳನ್ನು ಬಿಡುಗಡೆ ಮಾಡುವ ಸಂಬಂಧ ಇತ್ತೀಚೆಗೆ ಭಾರತೀಯ ರಿಸರ್ವ್ ಬ್ಯಾಂಕು ನೀಡಿದ ಜಾಹೀರಾತಿನ ಕಡೆಗೂ ಸಹ ನಿಮ್ಮ ಗಮನವನ್ನು ಸೆಳೆಯಲಾಗಿದೆ. ಆ ಜಾಹೀರಾತಿನಲ್ಲಿ ಹಳೆಯ ವಿನ್ಯಾಸದ ಹಸಿರು ಬಣ್ಣದ 500/– ರೂಪಾಯಿ ನೋಟುಗಳನ್ನು (ವಾಟರ್ ಮಾರ್ಕ್ ವಿಂಡೋದಲ್ಲಿ ಆಶೋಕ ಸ್ಥಂಬ ಇರುವ) ಹಿಂದುರಿಗಿಸಿ ಹೊಸ ವಿನ್ಯಾಸದ 500/– ರೂಪಾಯಿ ನೋಟುಗಳನ್ನು ವಿನಿಮಯ ಮಾಡಿಕೊಳ್ಳಬೇಕೆಂದು ಸಾರ್ವಜನಿಕರಿಗೆ ಆಹ್ವಾನ ನೀಡಲಾಗಿತ್ತು. ಇದು ಹಳೆಯ ವಿನ್ಯಾಸದ 500/– ರೂಪಾಯಿ ನೋಟುಗಳನ್ನು ಬದಲಾಯಿಸಿಕೊಳ್ಳುವುದಕ್ಕೆ ಸಾರ್ವಜನಿಕರಿಗೆ ನೀಡಿದ ಒಂದು ಸೌಲಭ್ಯ ಮಾತ್ರ ಎಂದು ನಾವು ಸ್ಪಷ್ಟಪಡಿಸಬಯಸುತ್ತೇನೆ. ಬ್ಯಾಂಕುಗಳು ಈ ನೋಟುಗಳನ್ನು ಅಂಗೀಕರಿಸದಿರುವುದಕ್ಕೆ ಇದನ್ನು ಒಂದು ಕಾರಣವಾಗಿ ನೀಡಬಾರದೆಂದು ನಾವು ಒತ್ತಿ ಹೇಳುತ್ತೇವೆ.

4. ಆದ್ದರಿಂದ ನೀವು ಎಲ್ಲಾ 500/– ರೂಪಾಯಿ ನೋಟುಗಳನ್ನು ಮುಕ್ತವಾಗಿ ಅಂಗೀಕರಿಸುವಂತೆ ಮತ್ತು ಸಾರ್ವಜನಿಕರ ಮನಸ್ಸಿನಲ್ಲಿ ಅನಗತ್ಯ ಭಯವನ್ನು ಸೃಷ್ಟಿಸದಂತೆ ನಿಮ್ಮ ಇಲ್ಲ ಶಾಖೆಗಳಿಗೆ ದಯವಿಟ್ಟು ಕೂಡಲೇ ಸೂಚನೆ ನೀಡಿ.

5. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,

(ಸಿ. ಕೃಷ್ಣನ್),
ಮುಖ್ಯ ಪ್ರಧಾನ ವ್ಯವಸ್ಥಾಪಕ.